BKN-02

Sl.No. :

Total No. of Pages : 3

ದ್ವಿತೀಯ ವರ್ಷದ ಬಿ.ಎ. ಪದವಿ ಪರೀಕ್ಷೆ, ಮೇ/ಜೂನ್- 2026

(SLM Scheme)

ಕನ್ನಡ ಭಾಷೆ (ಪತ್ರಿಕೆ–೨)

ಸವಿಸ್ತರ ಮತ್ತು ಅವಿಸ್ತರ ಪಠ್ಯಗಳು

(ಪ್ರಾಚೀನ ಕನ್ನಡ ಕಾವ್ಯ, ಸಣ್ಣ ಕಥೆಗಳು, ಗದ್ಯ ಸಂಪದ, ವಿಮರ್ಶೆ)

ಸಮಯ : 3 ಗಂಟೆಗಳು **ಗರಿಷ್ಠಾಂಕಗಳು : 80**

ಸೂಚನೆ : *ಎಲ್ಲಾ ಪ್ರಧಾನ ಪ್ರಶ್ನೆಗಳೂ ಕಡ್ಡಾಯ.*

ವಿಭಾಗ–ಎ

(ಪ್ರಾಚೀನ ಕನ್ನಡ ಕಾವ್ಯ : 20 ಅಂಕಗಳು)

ಪ್ರ1) ಒಂದರ ಭಾವವನ್ನು ಸಂದರ್ಭ ಸಹಿತ ವಿವರಿಸಿ. **[1×5=5]**

೧) ದೀಕ್ಷೆಗೆಯ್ಯುವುದೆ ಲೇಸೆಂದು, ಎದೆಯೊಳು ನೆನೆ
ದು, ಇಕ್ಷುಕೋದಂಡನಣ್ಣನನು
ಈಕ್ಷಿಸದೆ, ಎಡಬಲದತ್ತ ನೋಡಿದನು ಶಾಂ
ತಾಕ್ಷಿಯೊಳೊಮ್ಮೆ ಪಾಯ್ದಳವ.

೨) ಅಮೃತಮತಿಯೆತ್ತ ರೂಪಾ
ಧಮನ್, ಅಷ್ಟಾವಂಕನೆತ್ತ ಚಿತ್ರಮಪಾತ್ರೇ
ರಮತೇ ನಾರಿ ಎಂಬುದು
ಸಮನಿಸಿದುದು, ಬೆಂದ ಬಿದಿಗೆ ಕಣ್ಣಿಲ್ಲಕ್ಕುಂ.

ಪ್ರ2) ಹತ್ತು ಪದಗಳಿಗೆ ಅರ್ಥ ಬರೆಯಿರಿ. **[10×½=5]**

ಇಭಶೈಲ, ಬದಗಂ, ತೈಲ, ಮೋಹರ, ಸೊಡರು, ಮನಸಿಜ, ಪಡೆ, ಘಟ, ಈಣೆ, ಕಟಕ, ಎವೆ, ಅಡಗು, ಕುಕ್ಷಿ, ಬಾಳ್.

ಪ್ರ3) ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ. **[2×2½=5]**

೧) ಎನಗೆ ಮಿಕ್ಕ ಗಂಡರ್ ಸಮಸೋದರರ್

೨) ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತೆ ಇರಿಸು.

೩) ಶಿಶುವು ನೀನೆಲೆ ಮಗನೆ ಕಾದುವರು ಅಸಮಬಲರು.

೪) ನೀವೀರ್ವರುಂ ಪೋಗಿ ವಸುಮತಿಯೊಳಗೆ ಪುಟ್ಟಿ.

ಪ್ರ4) ಒಂದು ವಿಷಯಕ್ಕೆ ಟಿಪ್ಪಣಿ ಬರೆಯಿರಿ: **[1×5=5]**

೧) ರನ್ನ ಇತಿವೃತ್ತ

೨) ಅಕ್ಕಮಹಾದೇವಿ

ವಿಭಾಗ–ಬಿ

(ಪ್ರಾಚೀನ ಕನ್ನಡ ಕಾವ್ಯ, ಸಣ್ಣ ಕಥೆಗಳು : 30 ಅಂಕಗಳು)

ಪ್ರ5) ಒಂದು ಪ್ರಶ್ನೆಗೆ ಉತ್ತರಿಸಿ : **[1×10=10]**

೧) "ಭೀಷ್ಮ ಪಟ್ಟಾಭಿಷೇಕ' ಸಂದರ್ಭದಲ್ಲಿ ನಡೆದ ವಾಗ್ವಾದವನ್ನು ಕುರಿತು ಬರೆಯಿರಿ.

೨) ನಾಗಚಂದ್ರ ಚಿತ್ರಿಸಿರುವ ರಾವಣ ಪಾತ್ರದ ವೈಶಿಷ್ಟ್ಯವನ್ನು ನಿರೂಪಿಸಿ.

ಪ್ರ6) ಎರಡು ಪ್ರಶ್ನೆಗಳಿಗೆ ಉತ್ತರಿಸಿ. **[2×10=20]**

೧) ಭಾರತ ದೇಶದ ರೈತನ ಸಮಸ್ಯೆಗೆ ಚಿಕಿತ್ಸೆಯನ್ನು 'ಧನ್ವಂತರಿಯ ಚಿಕಿತ್ಸೆ' ಕಥೆಯಲ್ಲಿ ಕುವೆಂಪುರವರು ಹೇಗೆ ನೀಡಿದ್ದಾರೆ? ವಿಮರ್ಶಿಸಿ.

೨) ಸಮಾಜದಲ್ಲಿ ಕಂಡು ಬರುವ ಹುಳುಕು, ಕೊಳಕುಗಳನ್ನು 'ಶವದ ಮನೆ' ಕಥೆ ಹೇಗೆ ತೆರೆದು ತೋರುತ್ತದೆ? ವಿವರಿಸಿ.

೩) ಶೋಷಣೆಗೆ ಹಲವು ಸ್ತರಗಳನ್ನು 'ರೊಟ್ಟಿ' ಕಥೆ ಹೇಗೆ ಚಿತ್ರಿಸುತ್ತದೆ? ವಿವರಿಸಿ.

೪) ಕೃಷ್ಣೇಗೌಡನ ಆನೆಯ ಗುಣ, ಲಕ್ಷಣಗಳನ್ನು ವಿವರಿಸಿ.

ವಿಭಾಗ–ಸಿ

(ಗದ್ಯ ಸಂಪದ, ವಿಮರ್ಶೆ : 30 ಅಂಕಗಳು)

ಪ್ರ7) ಒಂದು ಪ್ರಶ್ನೆಗೆ ಉತ್ತರಿಸಿ : **[1×10=10]**

೧) 'ಕರ್ನಾಟಕ ವೈಭವ ವರ್ಣನೆ' ಲೇಖನದ ಸ್ವರೂಪ ಮತ್ತು ವಿಶಿಷ್ಟತೆಯನ್ನು ಕುರಿತು ಬರೆಯಿರಿ.

೨) 'ಶ್ರೇಷ್ಠತೆಯ ವ್ಯಸನ' ಲೇಖನದ ಒಳನೋಟಗಳನ್ನು ನಿರೂಪಿಸಿ.

ಪ್ರ8) ಒಂದು ವಿಷಯಕ್ಕೆ ಟಿಪ್ಪಣಿ ಬರೆಯಿರಿ : **[1×5=5]**

೧) ಎಚ್. ನರಸಿಂಹಯ್ಯ

೨) 'ರಾಷ್ಟ್ರೀಯತೆ : ಒಂದು ಮರುಚಿಂತನೆ'

ಪ್ರ9) <u>ಒಂದು</u> ಪ್ರಶ್ನೆಗೆ ಉತ್ತರಿಸಿ : **[1×10=10]**

೧) 'ಕನ್ನಡದಲ್ಲಿ ಬೌದ್ಧರು ಗ್ರಂಥಗಳನ್ನು ಬರೆದಿದ್ದರೆ'? ಲೇಖನದಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳನ್ನು ವಿಶದಪಡಿಸಿ.

೨) 'ಪರಂಪರೆ ಮತ್ತು ರಾಘವಾಂಕನ ಪ್ರತಿಭೆ' ಲೇಖನದಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳನ್ನು ನಿರೂಪಿಸಿ.

ಪ್ರ10)<u>ಒಂದು</u> ವಿಷಯಕ್ಕೆ ಟಿಪ್ಪಣಿ ಬರೆಯಿರಿ : **[1×5=5]**

೧) 'ಮಲೆಗಳಲ್ಲಿ ಮದುಮಗಳು' ಲೇಖನದ ಸ್ವರೂಪ.

೨) ಜಿ. ಎಚ್. ನಾಯಕ

● ● ●